quickmarketreports.com
Date : 24-10-2015

# ಒರಿಸ್ಸಾದಲ್ಲಿ ಹೆಚ್ಚು ಆಲೂಗಡ್ಡೆ, ನೀರುಳ್ಳಿ ಬೆಳೆಯುವ ಗುರಿ

ಒರಿಸ್ಸಾ ಸರಕಾರ 2015–16ನೇ ಸಾಲಿನಲ್ಲಿ 5.28 ಲಕ್ಷ ಟನ್ ಆಲೂಗಡ್ಡೆ ಹಾಗೂ 4.50 ಲಕ್ಷ ಟನ್ ನೀರುಳ್ಳಿ ಬೆಳೆಯುವ ಗುರಿಯಿರಿಸಿಕೊಂಡಿದೆ. ಮುಂದಿನೆರಡು ವರ್ಷಗಳಲ್ಲಿ ಒರಿಸ್ಸಾ ನೀರುಳ್ಳಿ ಮತ್ತು ಆಲೂಗಡ್ಡೆ ಬೆಳೆಯಲ್ಲಿ ಸ್ವಾವಲಂಬನೆಯ ಗುರಿಯಿರಿಸಿಕೊಂಡಿದೆಯೆಂದು ರಾಜ್ಯದ ಕೃಷಿ ಡಿಪಾರ್ಟ್‌ಮೆಂಟಿನ ಹಿರಿಯ ಅಧಿಕಾರಿ ಹೇಳಿಕೊಂಡಿದ್ದಾರೆ.

ಆಲೂಗಡ್ಡೆ ಬೇಡಿಕೆಗೆ ಪಶ್ಚಿಮ ಬಂಗಾಳವನ್ನು ಅವಲಂಬಿಸಿರುವ ಒರಿಸ್ಸಾ ಈಗ ಬೀಜ ಮತ್ತಿತರ ಸೌಲಭ್ಯವನ್ನು ರೈತರಿಗೆ ಪೂರೈಸಿ ಹೆಚ್ಚಿನ ಆಲೂಗಡ್ಡೆ ಬೆಳೆಯಲು ರೈತರಿಗೆ ಉತ್ತೇಜಿಸುತ್ತಿದೆ  ಹಾಗೂ 2020ರ ವೇಳೆಗೆ ರಾಜ್ಯದ ಅವಶ್ಯಕತೆಗಿಂತ ಹೆಚ್ಚುವರಿ ಬೆಳೆಯುವ  ಗುರಿ ಹೊಂದಿದೆ.

ಈ ವರ್ಷ ಕನಿಷ್ಠ 30 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಆಲೂಗಡ್ಡೆ ಬೆಳೆಯಲು ಉದ್ದೇಶಿಸಲಾಗಿದ್ದು 2014–15ರಲ್ಲಿ  16 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗಿತ್ತು.  2016–17ರಲ್ಲಿ 45 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಆಲೂಗಡ್ಡೆ ಬೆಳೆಯುವ ಯೋಜನೆ ಹೊಂದಿದೆ ಮತ್ತು 2017–18ರಲ್ಲಿ 60 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಆಲೂಗಡ್ಡೆ ಬೆಳೆಯುವ ಯೋಜನೆಯಿದೆಯೆನ್ನಲಾಗಿದೆ. ಕೃಷಿ ಇಲಾಖೆ ಈ ವರ್ಷ 30000 ಹೆಕ್ಟೇರ್‌ಗಳ ಕೃಷಿಯಿಂದ 5.28ಲಕ್ಷ ಟನ್ ಆಲೂಗಡ್ಡೆ ಬೆಳೆಯುವ ಗುರಿ ಹೊಂದಿದ್ದು 2017–18ರ ವೇಳೆಗೆ ಉತ್ಪಾದನೆ 11.12ಲಕ್ಷ ಟನ್‌ಗಳಿಗೇರಿಸುವ ನಿರೀಕ್ಷೆಯಿದೆ.